DECEMBER 25, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **1924 ರ ಕಾಂಗ್ರೆಸ್ ಮಹಾಧಿವೇಶನದ, ಶತಮಾನೋತ್ಸವ; ಬೆಳಗಾವಿಯಲ್ಲಿ ನಾಳೆ ಮತ್ತು ನಾಡಿದ್ದು, ವಿಶೇಷ ಕಾರ್ಯಕ್ರಮ.**
- **ಮಕ್ಕಳ ಸುರಕ್ಷತೆ ಖಾತ್ರಿ ಪಡಿಸಲು, ಮಕ್ಕಳ ಸ್ನೇಹಿ ಪೊಲೀಸ್ ಠಾಣೆ – ಶಶಿಧರ ಕೋಸಂಬೆ.**
- **ತೊಗರಿ ಮತ್ತು ಕಡಲೆಯನ್ನು, ಬೆಂಬಲ ಬೆಲೆಯಡಿ ಖರೀದಿಸಲು, ಕೇಂದ್ರ ಸರ್ಕಾರದ ಅನುಮತಿ.**
- **ಇಂದು ಸಂಭ್ರಮ ಸಡಗರದಿಂದ, ಕ್ರಿಸ್ಮಸ್ ಹಬ್ಬದಾಚರಣೆ; ಗಣ್ಯರ ಶುಭಾಶಯ.**

<><><>

**ಈಗ ವಾರ್ತೆಗಳ ವಿವರ**

<><><>

**'ಗಾಂಧಿ ಭಾರತ' ಧ್ಯೇಯದೊಂದಿಗೆ, ಬೆಳಗಾವಿಯಲ್ಲಿ ನಾಳೆ ಮತ್ತು ನಾಡಿದ್ದು ಆಯೋಜಿತ, 39ನೇ ಕಾಂಗ್ರೆಸ್ ಮಹಾಧಿವೇಶನದ, ಶತಮಾನೋತ್ಸವ ಹಿನ್ನೆಲೆ, ಸ್ವಾತಂತ್ರ್ಯ ಯೋಧರ ಕುಟುಂಬಗಳಿಗೆ, ಸ್ವಾಗತ ಸಮಿತಿ ಅಧ್ಯಕ್ಷ ಎಚ್.ಕೆ. ಪಾಟೀಲ ಆಮಂತ್ರಣ ನೀಡಿ,**

ಆಹ್ವಾನಿಸಿದರು. ಸುವರ್ಣ ವಿಧಾನಸೌಧದ ಮುಂದೆ ಪ್ರತಿಷ್ಠಾಪಿಸಲಾಗಿರುವ, ಮಹಾತ್ಮ ಗಾಂಧಿ ಪುತ್ಥಳಿ ಅನಾವರಣಕ್ಕೆ, ಕುಟುಂಬ ಸಮೇತ ಆಗಮಿಸುವಂತೆ, ಸರ್ವಶ್ರೀ ಅಣ್ಣು ಗುರೂಜಿ, ವಿಠ್ಠಲರಾವ್ ಯಾಳಗಿ ಹಾಗೂ ಗಂಗಾಧರರಾವ್ ದೇಶಪಾಂಡೆ ಅವರ ಮನೆಗಳಿಗೆ ತೆರಳಿ, ಕುಟುಂಬಸ್ಥರಿಗೆ ಆಹ್ವಾನ ಪತ್ರ ನೀಡಿದರು.

<><><>

ಅಣ್ಣು ಗುರೂಜೀ ಅವರ ಮೊಮ್ಮಗ, ಮಹೇಶ ದೇಶಪಾಂಡೆ, ಆಮಂತ್ರಣ ಸ್ವೀಕರಿಸಿ ಮಾತನಾಡಿ, ಅಸ್ಪ್ರಶ್ಯತೆ ನಿವಾರಣೆಗೆ ಗಾಂಧೀಜಿ ಅವರು ಕರೆಕೊಟ್ಟ 1924ರ ಐತಿಹಾಸಿಕ ಬೆಳಗಾವಿ ಅಧಿವೇಶನದ ಪರಿಣಾಮ, ತಮ್ಮ ಹಿರಿಯರು ಸ್ವತಃ ಮಲದ ಗುಂಡಿಗಳನ್ನು ಸ್ವಚ್ಛಗೊಳಿಸಿ, ಮಾದರಿಯಾದರು. ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದರು ಎಂದರು.

<><><>

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆ, ದೇಶಾದ್ಯಂತ 75 ಮಹತ್ವದ ಜೌಗು ತಾಣಗಳಿಗೆ, ರಾಮ್‌ಸಾರ್ ತಾಣಗಳೆಂಬ ಮನ್ನಣೆ ದೊರಕಿಸುವ ಪ್ರಯತ್ನ ಗಣನೀಯ ಯಶಸ್ಸು ಕಂಡಿದೆ. ಪ್ರಸಕ್ತ ಸಾಲಿಗೆ, ಅಘನಾಶಿನಿ ನದಿ ಅಳಿವೆ ಸೇರಿ, ರಾಜ್ಯದ ಒಟ್ಟು ನಾಲ್ಕು ಪ್ರಮುಖ ತಾಣಗಳಿಗೆ, ರಾಮ್‌ಸಾರ್ ಜೌಗು ತಾಣ ಎಂಬ ಮಾನ್ಯತೆ ದೊರಕಿದಂತಾಗಿದೆ. ವಲಸೆ ಹಕ್ಕಿಗಳು ಸೇರಿದಂತೆ, ತರಿಭೂಮಿಯ ಜೀವವೈವಿಧ್ಯ ಅಧ್ಯಯನಕ್ಕೆ ಈ ಪ್ರಮಾಣೀಕರಣ ಬಲ ತುಂಬಿದೆ.

<><><>

ರಾಮ್‌ಸಾರ್ ವೆಟ್ ಲ್ಯಾಂಡ್ಸ್ ಮಾನ್ಯತೆ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಪರಿಸರ ಪತ್ರಕರ್ತ, ನಾಗೇಶ ಹೆಗಡೆ.

<><><>

ಮಕ್ಕಳ ಸುರಕ್ಷತೆ ಖಾತ್ರಿ ಪಡಿಸಲು, ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯ, ಶಾಲೆ, ಕಾಲೇಜು ಹಾಗೂ ವಸತಿ ನಿಲಯಗಳಿಗೆ, ಪೊಲೀಸ್ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳು, ನಿಯಮಿತವಾಗಿ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸುವಂತೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ನಿರ್ದೇಶಿಸಿದ್ದಾರೆ. ಯಾದಗಿರಿ ಜಿಲ್ಲಾ ಪೊಲೀಸ್ ವರಿ ್ಠಾಧಿಕಾರಿಗಳ ಕಚೇರಿಯಲ್ಲಿ, ಮಕ್ಕಳ ವಿಶೇ ’ ಪೊಲೀಸ್ ಘಟಕದ, ಪ್ರಗತಿ ಪರಿಶೀಲಿಸಿ, ಮಾತನಾಡಿದರು. ಮಕ್ಕಳ ಸಮಸ್ಯೆಗಳಿಗೆ, ಸಕಾಲದಲ್ಲಿ ಮತ್ತು ಸಂವೇದನಾಶೀಲತೆಯಿಂದ,

ಸೂಕ್ಷ್ಮತೆ ಹಾಗೂ ಪ್ರಕರಣದ ಗಾಂಭೀರ್ಯ ಅರ್ಥಮಾಡಿಕೊಂಡು, ನ್ಯಾಯ ಒದಗಿಸಲು ಅಧಿಕಾರಿಗಳು ಸಹೃದಯತೆ ತೋರುವಂತೆ ಸೂಚಿಸಿದರು.

<><><>

ಚಿತ್ರದುರ್ಗ ಜಿಲ್ಲೆಯ ಎಲ್ಲ ಶಾಲಾ–ಕಾಲೇಜುಗಳಲ್ಲಿ, ‘ಮಕ್ಕಳ ರಕ್ಷಣಾ ನೀತಿ 2016’ ಪರಿಣಾಮಕಾರಿ ಅನುಷ್ಠಾನ ಖಾತ್ರಿ ಪಡಿಸುವಂತೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ, ಕೆ.ಟಿ.ತಿಪ್ಪೇಸ್ವಾಮಿ ನಿರ್ದೇಶಿಸಿದ್ದಾರೆ. ಜಿಲ್ಲಾ ಕ್ರೀಡಾಂಗಣ ಸಭಾಂಗಣದಲ್ಲಿ, ‘ಶಾಲೆಯಲ್ಲಿದೆ ಶಿಕ್ಷಣದ ಜೊತೆಗೆ ರಕ್ಷಣೆ’ ಕಾರ್ಯಕ್ರಮ ಉದ್ಘಾಟಿಸಿ ಅವರು, ಮಾತನಾಡಿದರು. ಮಕ್ಕಳ ರಕ್ಷಣಾ ನೀತಿ ಅಡಿ, ಶಾಲೆಗಳು ಕೇವಲ ಶಿಕ್ಷಣ ನೀಡುವ ಕೇಂದ್ರಗಳಾಗದೆ, ರಕ್ಷಣೆಯನ್ನೂ ಒದಗಿಸಬೇಕಾದ ತುರ್ತು ಅಗತ್ಯವಿದೆ. ಮಕ್ಕಳ ಹಕ್ಕುಗಳ ರಕ್ಷಣೆ ಎಲ್ಲ ಶಿಕ್ಷಕರ ಹೊಣೆ, ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಸಾಯಿ ನಗರದ, ಅಚ್ಚವ್ವನ ಕಾಲೋನಿಯ ಈಶ್ವರ ದೇವಸ್ಥಾನದಲ್ಲಿ ಅಡುಗೆ ಅನಿಲ ಸೋರಿ, 9 ಅಯ್ಯಪ್ಪ ಮಾಲಾಧಾರಿಗಳು ಗಂಭೀರವಾಗಿ ಗಾಯಗೊಂಡ ಹಿನ್ನೆಲೆ, ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಪರಿಹಾರ ಒದಗಿಸಲಾಗುವುದು ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು.

<><><>

ವಿಧಾನ ಪರಿ ‘ತ್ ಸದಸ್ಯ ಸಿ.ಟಿ. ರವಿ ಅವರು, ಅಸಾಂವಿಧಾನಿಕ ಪದ ಬಳಸಿದರೆಂಬ ಆರೋಪದ ಪ್ರಕರಣವನ್ನು, ಸಿ.ಐ.ಡಿ. ತನಿಖೆಗೆ ಒಪ್ಪಿಸಲಾಗಿದೆ ಎಂದು, ಸಚಿವ ಜಿ.ಪರಮೇಶ್ವರ್ ಹುಬ್ಬಳ್ಳಿಯಲ್ಲಿ ಸುದ್ದಿಗಾರರಿಗೆ ಸ್ಪ ್ಟ ಪಡಿಸಿದರು.

<><><>

ಈ ಮಧ್ಯೆ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ನಾಯಕರು, ಬೆಂಗಳೂರಿನಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, ವಿಧಾನ ಪರಿ ‘ತ್ ಸದಸ್ಯ ಸಿ.ಟಿ.ರವಿ ವಿಚಾರದಲ್ಲಿ, ಸತ್ಯಶೋಧನಾ ಸಮಿತಿ ರಚಿಸುವಂತೆ ಹಾಗೂ ರಾಜ್ಯ ಸರ್ಕಾರದ ನಡೆ ವಿರುದ್ಧ, ದೂರು ಸಲ್ಲಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ನಡೆದ 64ನೇ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ ಸಭೆಯಲ್ಲಿ, 10 ಸಾವಿರ ಕೋಟಿಗೂ ಅಧಿಕ ಮೊತ್ತದ ಹೂಡಿಕೆ ಯೋಜನೆಗಳಿಗೆ, ಅನುಮೋದನೆ ದೊರಕಿದೆ. ಬೃಹತ್ ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ, ಮಾಹಿತಿ ನೀಡಿ, ಮೈಸೂರು, ಕಲಬುರಗಿ, ರಾಮನಗರ, ಬಳ್ಳಾರಿ, ಧಾರವಾಡ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ, 6 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದರು.

<><><>

ತೊಗರಿ ಮತ್ತು ಕಡಲೆಯನ್ನು, ಬೆಂಬಲ ಬೆಲೆಯಡಿ ಖರೀದಿಸಲು, ಕೇಂದ್ರ ಸರ್ಕಾರ ಅನುಮತಿಸಿದೆ ಎಂದು, ಕೃಷಿ ಮಾರುಕಟ್ಟೆ ಖಾತೆ ಸಚಿವ ಶಿವಾನಂದ ಪಾಟೀಲ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಪ್ರತಿ ಕ್ವಿಂಟಾಲ್ ತೊಗರಿಗೆ 7 ಸಾವಿರದ 550 ಹಾಗೂ ಕಡಲೆಗೆ 5 ಸಾವಿರದ 650 ರೂಪಾಯಿ, ನಿಗದಿ ಪಡಿಸಲಾಗಿದೆ. ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ವಿಜಯಪುರ, ಕೊಪ್ಪಳ, ಬೆಳಗಾವಿ, ಬಳ್ಳಾರಿ, ವಿಜಯನಗರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಖರೀದಿ ಕೇಂದ್ರ ಆರಂಭಿಸಲಾಗುವುದು ಎಂದರು.

<><><>

ಇಂದು ಏಸು ಕ್ರಿಸ್ತರ ಜನ್ಮದಿನ. ಕ್ರಿಸ್ಮಸ್ ಹಬ್ಬವನ್ನು ಸಂಭ್ರಮ ಸಡಗರದಿಂದ ಕ್ರಿಶ್ಚಿಯನ್ ಬಾಂಧವರು ದೇಶಾದ್ಯಂತ ಆಚರಿಸುತ್ತಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ, ಗಣ್ಯರು ಶುಭಾಶಯ ಕೋರಿದ್ದಾರೆ. ನಿನ್ನೆ ಕ್ರಿಸ್ಮಸ್ ಈವ್ ಸಂಭ್ರಮದಿಂದ ಜರುಗಿತು. ರಾಜ್ಯಾದ್ಯಂತ ಚರ್ಚ್‌ಗಳಿಗೆ ವಿದ್ಯುದ್ದೀಪಗಳಿಂದ ಅಲಂಕರಿಸಿ, ಸಿಂಗರಿಸಲಾಗಿತ್ತು.

<><><>

ಕರ್ನಾಟಕ ನಾರ್ದರ್ನ್ ಡಯೋಸಿಸ್, ಚರ್ಚ್ಸ್ ಆಫ್ ಸದರ್ನ್ ಇಂಡಿಯಾದ, ಬಾಸೆಲ್ ಮಿಷನ್ ಉತ್ತರ ಸಭಾ ಪ್ರಾಂತದ, ಬಿಷಪ್, ರೈಟ್ ರೆವರೆಂಡ್ ಮಾರ್ಟಿನ್ ಚಾರ್ಲ್ಸ್ ಬೋರ್ಗಾಯಿ, ಕ್ರಿಸ್ಮಸ್ ಶುಭಾಶಯ ಕೋರಿದ್ದಾರೆ.

<><><>

ರಾಜ್ಯದ ಹೊರ ಗುತ್ತಿಗೆ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು, ‘ಬೀದರ್ ಮಾದರಿ’ ಮೂಲಕ, ಪರಿಹಾರ ಕಂಡುಕೊಳ್ಳಲಾಗಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಜಾಲತಾಣ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಮುಂದಿನ ಹಂತವಾಗಿ, ಮೈಸೂರು, ಧಾರವಾಡ ಹಾಗೂ ತುಮಕೂರು ವಿಭಾಗ ವ್ಯಾಪ್ತಿಯ ಜಿಲ್ಲೆಗಳಲ್ಲಿ, ಬೀದರ್ ಮಾದರಿ ಅನುಷ್ಠಾನಕ್ಕೆ ಯೋಜಿಸಲಾಗಿದೆ ಎಂದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಭಾರತರತ್ನ, ಮಾಜಿ ಪ್ರಧಾನಮಂತ್ರಿ, ಮುತ್ಸದ್ದಿ, ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ಜಯಂತಿ ಇಂದು. ವಿಶೇಷ ಅಂಚೆ ಚೀಟಿ ಮತ್ತು ನಾಣ್ಯ ಹಾಗೂ ಸಾವಿರದ 153 ಅಟಲ್ ಗ್ರಾಮ ಸುಶಾಸನ ಕಟ್ಟಡಗಳ ಶಂಕುಸ್ಥಾಪನೆಯನ್ನು, ಪ್ರಧಾನಮಂತ್ರಿ ಮೋದಿ ಅವರು, ಮಧ್ಯಪ್ರದೇಶದಲ್ಲಿ ನೆರವೇರಿಸಲಿದ್ದಾರೆ.

<><><>

ಹೆಸರಾಂತ ಚಿತ್ರ ನಿರ್ದೇಶಕ, ಕಲಾತ್ಮಕ ಪ್ರತಿಭೆ, ಶ್ಯಾಮ ಬೆನಗಲ್ ಅವರ ನಿಧನಕ್ಕೆ, ಧಾರವಾಡದ ಆವಿಷ್ಕಾರ ಫಿಲ್ಮ್ ಸೊಸೈಟಿ ಘಟಕ, ಸಂತಾಪ ಸೂಚಿಸಿದೆ.

<><><>

2025ರ ಗಣರಾಜ್ಯೋತ್ಸವದ ಸ್ತಬ್ಧಚಿತ್ರಗಳ ಧ್ಯೇಯ, 'ಸುವರ್ಣ ಭಾರತ; ಪರಂಪರೆ ಮತ್ತು ವಿಕಾಸ' ಎಂದು, ರಕ್ಷಣಾ ಸಚಿವಾಲಯ ತಿಳಿಸಿದೆ.

<><><>

ಖ್ಯಾತ ಚಿತ್ರನಟ ಶಿವರಾಜಕುಮಾರ, ವಿದೇಶದಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ಬೇಗ ಚೇತರಿಸಿಕೊಳ್ಳಲಿ ಎಂದು, ಮುಖ್ಯಮಂತ್ರಿ ಹಾರೈಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 1924ರ ಕಾಂಗ್ರೆಸ್ ಮಹಾಧಿವೇಶನದ, ಶತಮಾನೋತ್ಸವ; ಬೆಳಗಾವಿಯಲ್ಲಿ ನಾಳೆ ಮತ್ತು ನಾಡಿದ್ದು, ವಿಶೇಷ ಕಾರ್ಯಕ್ರಮ.
- ಮಕ್ಕಳ ಸುರಕ್ಷತೆ ಖಾತ್ರಿ ಪಡಿಸಲು, ಮಕ್ಕಳ ಸ್ನೇಹಿ ಪೊಲೀಸ್ ಠಾಣೆ – ಶಶಿಧರ ಕೋಸಂಬೆ.
- ತೊಗರಿ ಮತ್ತು ಕಡಲೆಯನ್ನು, ಬೆಂಬಲ ಬೆಲೆಯಡಿ ಖರೀದಿಸಲು, ಕೇಂದ್ರ ಸರ್ಕಾರದ ಅನುಮತಿ.
- ಇಂದು ಸಂಭ್ರಮ ಸಡಗರದಿಂದ, ಕ್ರಿಸ್ಮಸ್ ಹಬ್ಬದಾಚರಣೆ; ಗಣ್ಯರ ಶುಭಾಶಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ